ಈ ಲೇಖನದ ವಿಷಯಾನುಕ್ರಮಣಿಕೆ

ಕಾರ್ತಿಕಸ್ನಾನವಿಧಿ 2

ಕಾರ್ತಿಕ ವೈಷ್ಣವರಿಗೆ ಅತ್ಯಂತ ಮಹತ್ತ್ವದ್ದು 3

ಕಾರ್ತಿಕಸ್ನಾನದ ಮಹಾಫಲಗಳು 4

ಕಾರ್ತಿಕಸ್ನಾನದ ಕಾಲ 7

ಶೂದ್ರರ ಕಾರ್ತೀಕ ಸ್ನಾನದ ಕ್ರಮ 8

ಸ್ನಾನದ ಸಂಕಲ್ಪ 10

ಅನುಮತಿಪ್ರಾರ್ಥನೆ 12

ಸ್ನಾನದ ಕ್ರಮ 13

ಪ್ರಾರ್ಥನೆ 14

ಸ್ನಾನಾಂಗ ಅರ್ಘ್ಯ 16

ದಾಮೋದರನಿಗೆ ಶಂಖದಿಂದ ಅರ್ಘ್ಯ 18

ಅರ್ಘ್ಯಮಂತ್ರ 21

ಕರ್ಮಸಮರ್ಪಣೆ 22

## ಕಾರ್ತಿಕಸ್ನಾನವಿಧಿ

ಪರಮಾತ್ಮ ಕಲಿಯುಗದ ಜನರ ಮೇಲೆ ಮಾಡಿರುವ ಅನುಗ್ರಹಕ್ಕೆ ಕೊನೆಯಿಲ್ಲ.

ಸಾಧನಮಾರ್ಗದಲ್ಲಿ ಯಾವ ಎತ್ತರವನ್ನು ಮುಟ್ಟಲು ಕೃತ-ತ್ರೇತಾ-ದ್ವಾಪರ ಯುಗಗಳಲ್ಲಿ ಮನುಷ್ಯರು ಅತೀಪ್ರಯಾಸವನ್ನು ಪಡಬೇಕೋ, ಆ ಎತ್ತರವನ್ನು ಕಲಿಯುಗದಲ್ಲಿ ಅತ್ಯಂತ ಸುಲಭವಾಗಿ ಏರಬಹುದು.

ಏಕಾದಶಿಯ ಉಪವಾಸ, ಚಾತುರ್ಮಾಸ್ಯದ ಆಚರಣೆ, ಕಾರ್ತಿಕ, ವೈಶಾಖ, ಮಾಘಮಾಸಗಳಲ್ಲಿ ಪ್ರಾತಃಸ್ನಾನ, ದೀಪಹಚ್ಚುವದು, ದೀಪದಾನ ಹೀಗೆ ಅತ್ಯಂತ ಸುಲಭವಾಗಿ ಆಚರಿಸಬಹುದಾದ ಧರ್ಮಗಳಿಂದ ಮಹತ್ತರ ಪುಣ್ಯವನ್ನು ಮನುಷ್ಯ ಗಳಿಸುತ್ತಾನೆ. ದೇವರಿಗೆ ಹತ್ತಿರದವನಾಗುತ್ತಾನೆ.

ಸ್ನಾನ ಇದು ಪ್ರತೀನಿತ್ಯದ ಕಾಯಕ. ಆದರೆ, ಅದೇ ಸ್ನಾನವನ್ನು ವಿಧ್ಯುಕ್ತವಾಗಿ ಮಾಡಿದಾಗ ಬರುವ ಪುಣ್ಯ ಅನಂತವಾದದ್ದು.

## ಕಾರ್ತಿಕ ವೈಷ್ಣವರಿಗೆ ಅತ್ಯಂತ ಮಹತ್ತ್ವದ್ದು

**ಕಾರ್ತಿಕಃ ಪ್ರವರೋ ಮಾಸೋ**
**ವೈಷ್ಣವಾನಾಂ ಸದಾ ಪ್ರಿಯಃ ।**
**ಸಮುದ್ರಗಾ ನದೀ ಪುಣ್ಯಾ**
**ದುರ್ಲಭಾ ಸ್ನಾನಶಾಲಿನಾಮ್[1] ।।**

ಕಾರ್ತಿಕ ಮಾಸ ವೈಷ್ಣವರಿಗೆ ಅತ್ಯಂತ ಪ್ರಿಯವಾದದ್ದು. ಅದಕ್ಕೇ ಮಹಾವೈಷ್ಣವೋತ್ತಮರಾದ ರುದ್ರದೇವರಿಗೆ ಕಾರ್ತಿಕ ಅತ್ಯಂತ ಪ್ರಿಯ. ನಿತ್ಯದಲ್ಲಿಯೂ ಪ್ರಾತಃ ಸ್ನಾನ ಮಾಡುವ ಮಹಾನುಭಾವರಿಗೂ ಕಾರ್ತಿಕದಲ್ಲಿ ಸಮುದ್ರವನ್ನು ಸೇರುವ ನದಿಗಳನ್ನು ಮಾಡುವ ಸ್ನಾನ ದುರ್ಲಭವೇ. ಇನ್ನು, ಗಂಗಾ, ಗೋದಾವರೀ, ಕೃಷ್ಣಾ, ಕಾವೇರೀ ಮುಂತಾದ ಮಹಾನದಿಗಳಲ್ಲಿ

[1] ಪದ್ಮಪುರಾಣ ಉತ್ತರಖಂಡ, 118.27

ಕಾರ್ತಿಕ ಸ್ನಾನ ಅತ್ಯಂತ ಅತ್ಯಂತ ದುರ್ಲಭ. ಹೀಗಾಗಿ ಪ್ರಯತ್ನಪಟ್ಟು ಈ ನದಿಗಳಲ್ಲಿ ಕಾರ್ತಿಕಮಾಸದಲ್ಲಿ ಪ್ರಾತಃಸ್ನಾನವನ್ನು ಮಾಡಬೇಕು.

## ಕಾರ್ತಿಕಸ್ನಾನದ ಮಹಾಫಲಗಳು

ಪ್ರತೀನಿತ್ಯದ ಪ್ರಾತಃಸ್ನಾನಕ್ಕೇ ನಮ್ಮ ಪಾಪಗಳನ್ನು ಪರಿಹಾರ ಮಾಡುವ ಸಾಮರ್ಥ್ಯವಿದೆ. ಇನ್ನು ಕಾರ್ತಿಕಾದಿ ಮಾಸಗಳಲ್ಲಿ ಮಾಡುವ ಸ್ನಾನಕ್ಕೆ ಬ್ರಹ್ಮಹತ್ಯೆ, ಭ್ರೂಣಹತ್ಯೆಯಂತಹ ಮಹಾಪಾತಕಗಳನ್ನೂ ನಾಶ ಮಾಡುವ ಸಾಮರ್ಥ್ಯವಿದೆ ಎಂದು ಶ್ರೀ ವಿಷ್ಣುಸ್ಮೃತಿಯಲ್ಲಿ ಭಗವಂತನ ವಚನವಿದೆ —

**ತುಲಾಮಕರಮೇಷೇಷು**
**ಪ್ರಾತಃಸ್ನಾನಂ ವಿಧೀಯತೇ ।**
**ಹವಿಷ್ಯಂ ಬ್ರಹ್ಮಚರ್ಯಂ ಚ**
**ಮಹಾಪಾತಕನಾಶನಮ್ ।।**

ತುಲಾ, ಮಕರ ಮತ್ತು ಮೇಷಗಳಲ್ಲಿ ರವಿಯಿದ್ದಾಗ ಅಂದರೆ, ಕಾರ್ತೀಕ, ಮಾಘ, ವೈಶಾಖಮಾಸಗಳಲ್ಲಿ ಪ್ರಾತಃಸ್ನಾನ ಮಾಡುವದರಿಂದ, ದೇವರಿಗೆ ಅರ್ಪಿಸಿದ ಪದಾರ್ಥವನ್ನಷ್ಟೇ ಉಣ್ಣುವದರಿಂದ ಬ್ರಹ್ಮಚರ್ಯವನ್ನು ಪಾಲಿಸುವದರಿಂದ ಮಹಾಪಾತಕಗಳೂ ವಿನಾಶವಾಗುತ್ತವೆ.

ಅದೇ ವಿಷ್ಣುಸ್ಮೃತಿಯಲ್ಲಿನ ಮತ್ತೊಂದು ವಚನ —

**ಕಾರ್ತಿಕಂ ಸಕಲಂ ಮಾಸಂ**
**ನಿತ್ಯಸ್ನಾಯೀ ಜಿತೇಂದ್ರಿಯಃ ।**
**ಜಪನ್ ಹವಿಷ್ಯಭುಕ್ ಶಾಂತಃ**
**ಸರ್ವಪಾಪೈಃ ಪ್ರಮುಚ್ಯತೇ ।।**

ಇಡಿಯ ಕಾರ್ತಿಕಮಾಸದಲ್ಲಿ ಪ್ರಾತಃಸ್ನಾನ ಮಾಡುವದರಿಂದ, ಬ್ರಹ್ಮಚರ್ಯವನ್ನು ಪಾಲಿಸುವದರಿಂದ, ಮಂತ್ರಗಳ ಜಪ ಮಾಡುವದರಿಂದ, ದೇವರಿಗೆ ಅರ್ಪಿತವಾದದ್ದನ್ನು ಮಾತ್ರ ಉಣ್ಣುವದರಿಂದ, ಕೋಪವನ್ನು ತ್ಯಾಗ

ಮಾಡುವದರಿಂದ ಸಕಲಪಾಪಗಳಿಂದಲೂ ನಿರ್ಮುಕ್ತನಾಗುತ್ತಾನೆ.

ಪದ್ಮಪುರಾಣದ ವಚನ ಹೀಗಿದೆ[2] —

**ಬಾಲಾ ಚ ತರುಣೀ ವೃದ್ಧಾ**
**ನರನಾರೀನಪುಂಸಕಾಃ**
**ಪಾಪೈಃ ಸರ್ವೈಃ ಪ್ರಮುಚ್ಯಂತೇ**
**ಸ್ನಾನಾತ್ ಕಾರ್ತಿಕಮಾಘಯೋಃ**
**ಸ್ನಾತಾ ವೈ ಕಾರ್ತಿಕೇ ಲೋಕಾಃ**
**ಪ್ರಾಪ್ನುವಂತೀಪ್ಸಿತಂ ಫಲಮ್**

ಸಣ್ಣಹುಡುಗಿಯಾಗಲೀ, ಯುವತಿಯಾಗಲೀ, ಮುದುಕಿಯಾಗಲೀ, ಹಾಗೆಯೇ ಎಲ್ಲ ವಯಸ್ಸಿನ ಪುರುಷರು, ಸ್ತ್ರೀಯರು, ನಪುಂಸಕರು ಕಾರ್ತಿಕಮಾಸ ಹಾಗೂ ಮಾಘಮಾಸಗಳಲ್ಲಿ ಪ್ರಾತಃಸ್ನಾನವನ್ನು ಮಾಡುವದರಿಂದ ಎಲ್ಲ ಪಾಪಗಳಿಂದ ನಿರ್ಮುಕ್ತರಾಗುತ್ತಾರೆ.

ಏನನ್ನು ಅಪೇಕ್ಷೆ ಪಟ್ಟು ಸ್ನಾನ ಮಾಡಿದರೂ ಆ ಫಲವನ್ನು ಕಾರ್ತಿಕಸ್ನಾನದಿಂದ ಪಡೆಯುತ್ತಾರೆ.

---

[2] ಉತ್ತರಖಂಡ. 118ನೇ ಅಧ್ಯಾಯ, 32ನೇ ಶ್ಲೋಕ.

ಮುಖ್ಯವಾಗಿ ಎಲ್ಲ ವಯಸ್ಸಿನ ಹೆಣ್ಣುಮಕ್ಕಳು ಈ ರೀತಿಯಾಗಿ ಸ್ನಾನ ಮಾಡುವದರಿಂದ ಸಕಲ ಸೌಭಾಗ್ಯಗಳನ್ನೂ ಪಡೆಯುತ್ತಾರೆ.

## ಕಾರ್ತಿಕಸ್ನಾನದ ಕಾಲ

ಕಾರ್ತಿಕಸ್ನಾನಕ್ಕಾಗಿ ಕೃಷ್ಣಾದಿಯಾದ[3] ಮಾಸವನ್ನು ಗಣನೆ ಮಾಡಬೇಕು. ಅಂದರೆ ಆಶ್ವೀನ ಕೃಷ್ಣ ಹುಣ್ಣಿಮೆಯಿಂದ ಕಾರ್ತೀಕ ಶುಕ್ಲ ಹುಣ್ಣಿಮೆಯವರೆಗೆ ಕಾರ್ತಿಕಸ್ನಾನವನ್ನು ಆಚರಿಸಬೇಕು.

ಇದನ್ನು ಆಶ್ವೀನ ಶುದ್ಧ ಏಕಾದಶಿಯಿಂದ ಆರಂಭಿಸಿ ಕಾರ್ತಿಕಶುಕ್ಲ ಪೌರ್ಣಿಮೆಯವರೆಗೂ ಆಚರಿಸುವ ಪದ್ಧತಿಯೂ ಇದೆ.

**ಪ್ರಾರಭ್ಯೈಕಾದಶೀಂ ಶುಕ್ಲಾಂ**
**ಆಶ್ವಿನಸ್ಯ ತು ಮಾನವಃ ।**
**ಪ್ರಾತಃಸ್ನಾನಂ ಪ್ರಕುರ್ವೀತ**
**ಯಾವತ್ ಕಾರ್ತಿಕಭಾಸ್ಕರಃ ।।**

---

[3] ಕೃಷ್ಣಾದಿ ಮತ್ತು ಶುಕ್ಲಾದಿ ಮಾಸಗಳ ಲೆಕ್ಕವನ್ನು ಬನ್ನಂಜೆವಿಮರ್ಶದ ಪುಸ್ತಕದಲ್ಲಿ ವಿಸ್ತಾರವಾಗಿ ವಿವರಿಸಿದ್ದೇನೆ.

ಆದರೆ, ಪ್ರಸಿದ್ಧವಾದ ಆಚರಣೆ ಆಶ್ವೀನ ಶುಕ್ಲ ಹುಣ್ಣಿಮೆಯಿಂದ ಕಾರ್ತಿಕ ಹುಣ್ಣಿಮೆಯ ವರೆಗೆ.

## ಶೂದ್ರರ ಕಾರ್ತೀಕ ಸ್ನಾನದ ಕ್ರಮ

ಮಂತ್ರಪೂರ್ವಕವಾದ ಸ್ನಾನ, ಅರ್ಘ್ಯಗಳು ಶೂದ್ರರಿಗೆ ಇರುವದಿಲ್ಲ.

ಭಾರತೀರಮಣ ಮುಖ್ಯಪ್ರಾಣನ ಅಂತರ್ಯಾಮಿಯಾದ ರಾಧಾದಾಮೋದರ, ನಿನ್ನ ಪ್ರೀತಿಗಾಗಿ ಸ್ನಾನ ಮಾಡುತ್ತಿದ್ದೇನೆ ಎಂದು ಮನಸ್ಸಿನಲ್ಲಿಯೇ ಚಿಂತಿಸಿ ಸೂರ್ಯೋದಯಕ್ಕಿಂತ ಮುಂಚೆ ಸ್ನಾನ ಮಾಡಬೇಕು.

ಆ ನಂತರ ಗೋಪೀಚಂದನ ಮುದ್ರೆಗಳನ್ನು ಧರಿಸಿ ಭಾರತೀಪತಿ ಮುಖ್ಯಪ್ರಾಣದೇವರ ಅಂತರ್ಯಾಮಿಯಾದ ರಾಧಾನಾಮಕ ಲಕ್ಷ್ಮೀಸಮೇತನಾದ ದಾಮೋದರನನ್ನು ಸ್ಮರಿಸುತ್ತ ದೇವರಿಗೆ ನಮಸ್ಕಾರ ಮಾಡಬೇಕು.

ಇಷ್ಟರಿಂದಲೇ ಶೂದ್ರರಿಗೆ ಸಮಗ್ರ ಕ್ರಿಯೆಗಳ ಫಲ ದೊರೆಯುತ್ತದೆ. ಅರ್ಘ್ಯ, ಮಂತ್ರಪಠಣಾದಿಗಳನ್ನು ಮಾಡತಕ್ಕದ್ದಲ್ಲ.

**ಸ್ವೇ ಸ್ವೇ ಕರ್ಮಣ್ಯಭಿರತಃ**
**ಸಂಸಿದ್ಧಿಂ ಲಭತೇ ನರಃ.**

ತನಗೆ ವಿಹಿತವಾದ ಕರ್ಮಗಳನ್ನು ಮಾಡಿದಾಗ ಮಾತ್ರ ಸಿದ್ಧಿ ದೊರೆಯುತ್ತದೆ.

**ಸ್ವಧರ್ಮೇ ನಿಧನಂ ಶ್ರೇಯಃ**
**ಪರಧರ್ಮೋ ಭಯಾವಹಃ,** ತನ್ನ ಧರ್ಮದಲ್ಲಿಯೇ ನಿಷ್ಠನಾಗಬೇಕು, ಬೇರೆಯವರ ಧರ್ಮಾಚರಣೆ ಭಯಪ್ರದವಾದ ನರಕಾದಿಗಳನ್ನು ಉಂಟು ಮಾಡುತ್ತದೆ ಎಂಬ ಭಗವದ್ಗೀತೆಯ ಮಾತು ಸದಾ ಎಚ್ಚರದಲ್ಲಿರಬೇಕು.

ಬ್ರಾಹ್ಮಣ ಶೂದ್ರನಂತೆ ಅರ್ಘ್ಯ, ಮಂತ್ರಪಠಣಾದಿಗಳು ಇಲ್ಲದೆ ಕರ್ಮ ಮಾಡಿದರೆ ಬ್ರಾಹ್ಮಣನಿಗೆ ಅನರ್ಥ ಉಂಟಾಗುತ್ತದೆ.

ಶೂದ್ರ ಬ್ರಾಹ್ಮಣನಂತೆ ಅರ್ಘ್ಯ, ಮಂತ್ರಪಠಣಾದಿಗಳನ್ನು ಮಾಡಿದರೆ ಅವನಿಗೆ ಅನರ್ಥ ಉಂಟಾಗುತ್ತದೆ.

ಹೀಗಾಗಿ ಯಾರಿಗೆ ಯಾವುದು ವಿಹಿತವೋ ಅವರು ಅದನ್ನು ಮಾತ್ರ ಮಾಡತಕ್ಕದ್ದು. ಬೇರೆಯವರ ಧರ್ಮಾಚರಣೆಯನ್ನು ನಾವು ಮಾಡತಕ್ಕದ್ದಲ್ಲ.

## ಸ್ನಾನದ ಸಂಕಲ್ಪ

ಶೌಚ ದಂತಧಾವನಗಳನ್ನು ಮುಗಿಸಿ, ದೇವರಿಗೆ ನಮಸ್ಕಾರ ಮಾಡಿ ದೇವರ ಮನೆಯ ಮುಂದೆ ಕುಳಿತು ಆಚಮನ ಮಾಡಿ[4] ದೇಶಕಾಲಗಳ ಕುರಿತ ಸಂಕಲ್ಪವನ್ನು ಮಾಡಿ[5]

### ಮಮ ಗುರ್ವಂತರ್ಗತ (ಪತ್ಯಂತರ್ಗತ) ಪರಮಗುರ್ವಂತರ್ಗತ

---

[4] ಸ್ನಾನಕ್ಕಿಂತ ಮುಂಚೆ ಅವಶ್ಯವಾಗಿ ಆಚಮನ ಮಾಡಬಹುದು. ಸದಾಚಾರಸ್ಮೃತಿಯ ವ್ಯಾಖ್ಯಾನದಲ್ಲಿ ವಿವರಿಸುತ್ತೇನೆ.

[5] VNA013 ರಲ್ಲಿ ವಿವರಿಸಿದ್ದೇನೆ.

**ಶ್ರೀರಾಘವೇಂದ್ರ-ವ್ಯಾಸರಾಜ-ಜಯತೀರ್ಥಾದಿಸಮಸ್ತಗುರ್ವಂತರ್ಗತ ಸಮಸ್ತತೀರ್ಥಾಭಿಮಾನಿ ತತ್ವಾಭಿಮಾನಿದೇವತಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಕಾರ್ತಿಕರಾಧಾದಾಮೋದರಾಭಿನ್ನ ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ**

**ಮಮ ಸರ್ವಪಾಪಕ್ಷಯಾರ್ಥಂ ವಿಷ್ಣುಭಕ್ತಿ-ತತ್ವಜ್ಞಾನ-ವೈರಾಗ್ಯಾದಿ- ಮಹಾಸದ್ಗುಣ ಅಭಿವೃದ್ಧ್ಯರ್ಥಂ**

(ಮದುವೆ, ಮಕ್ಕಳು, ಹಣ, ಅರೋಗ್ಯದ ಅಪೇಕ್ಷೆಯಿದ್ದರೆ ಅದನ್ನೂ ಸಂಕಲ್ಪಿಸಿ, ವಿವಾಹ-ಸತ್ಸಂತಾನ-ಶುದ್ಧವಿತ್ತ-ಆರೋಗ್ಯಾದಿಪ್ರಾಪ್ತ್ಯರ್ಥಂ)

**ಕಾರ್ತಿಕೆ ಮಾಸಿ ಪ್ರಾತಃಸ್ನಾನಂ ಅಹಂ ಆಚರಿಷ್ಯೇ ಎಂದು ಸಂಕಲ್ಪ ಮಾಡಬೇಕು.**

## ಅನುಮತಿಪ್ರಾರ್ಥನೆ

ಆ ನಂತರ ದೇವರಿಗೆ ನಮಸ್ಕಾರ ಮಾಡಿ,

**ಅಶೇಷಜಗದಾಧಾರ**
**ಶಂಖಚಕ್ರಗದಾಧರ ।**
**ದೇಹಿ ದೇವ ಮಮಾನುಜ್ಞಾಂ**
**ಯುಷ್ಮತ್ತೀರ್ಥನಿಷೇವಣೇ ।।**

ಸಮಸ್ತ ಜಗತ್ತಿಗೆ ಆಶ್ರಯನಾದ, ಶಂಖ ಚಕ್ರ ಗದೆಗಳನ್ನು ಧರಿಸಿರುವ ಓ ದೇವ, ನಿನ್ನ ಸನ್ನಿಧಾನವುಳ್ಳ ತೀರ್ಥದಲ್ಲಿ ಸ್ನಾನ ಮಾಡಲು ಅನುಮತಿಯನ್ನು ನೀಡು.

ಆ ನಂತರ ಸದಾಚಾರಸ್ಮೃತಿಯ ವ್ಯಾಖ್ಯಾನದಲ್ಲಿ ತಿಳಿಸಿದಂತೆ[6] ದೇವರ ಕರ್ತೃತ್ವಾದಿಗಳನ್ನು ಚಿಂತಿಸಿ ಸ್ನಾನಕ್ಕಾಗಿ ತೆರಳಬೇಕು.

---

[6] VNA181, 182, 183 ಲೇಖನಗಳು.

## ಸ್ನಾನದ ಕ್ರಮ

ಆ ನಂತರ ನದಿಯಲ್ಲಿ ಸ್ನಾನ ಮಾಡುವದಾದರೆ ನದಿಯ ಪ್ರವಾಹಕ್ಕೆ ಅಭಿಮುಖವಾಗಿ ನಿಂತು,
ಸರೋವರದಲ್ಲಿ ಸ್ನಾನ ಮಾಡುವದಾದರೆ ಪೂರ್ವ ಅಥವಾ ಉತ್ತರಾಭಿಮುಖವಾಗಿ ನಿಂತು, ನಾಭಿ ಮುಳುಗುವಷ್ಟು ನೀರಿನಲ್ಲಿ ನಿಂತು
ಮನೆಯಲ್ಲಿ ಸ್ನಾನ ಮಾಡುವದಾದರೆ ಪೂರ್ವ ಅಥವಾ ಉತ್ತರಾಭಿಮುಖವಾಗಿ ಕುಳಿತು

ನದಿಗಳಲ್ಲಿ, ಸರೋವರಗಳಲ್ಲಿ ಆ ನದೀ ಸರೋವರಗಳಿಗಿಂತ ಉತ್ತಮ ನದೀ ಸರೋವರಗಳನ್ನು ಚಿಂತಿಸಿ
ಮನೆಯಲ್ಲಿ ಸ್ನಾನ ಮಾಡುವಾಗ ಸಮಸ್ತ ತೀರ್ಥಗಳನ್ನೂ ಚಿಂತಿಸಬೇಕು.[7]

[7] ಪ್ರಭಾತಪಂಚಕದ ಮೂರನೆಯ ಉಪನ್ಯಾಸದಲ್ಲಿ VNU191 ರಲ್ಲಿ ಶ್ರೀರಾಘವೇಂದ್ರಸ್ವಾಮಿಗಳು ರಚಿಸಿರುವ ನದೀತಾರತಮ್ಯಸ್ತೋತ್ರವನ್ನು ವಿವರಿಸಿ ನದಿಗಳ ತಾರತಮ್ಯವನ್ನು ತಿಳಿಸಲಾಗಿದೆ.

## ಪ್ರಾರ್ಥನೆ

ಆ ನಂತರ ಕಣ್ಣುಗಳನ್ನು ಮುಚ್ಚಿ ನಮ್ಮ ದೇಹದ ಅಸಾರತೆಯನ್ನು, ಈ ಅಸಾರವಾದ ದೇಹದಲ್ಲಿ ಪರಮಾತ್ಮ ವ್ಯಾಪಿಸಿ ನಿಂತಿರುವ ಬಗೆಯನ್ನೂ, ನಾವು ಮಾಡಿರುವ ಪಾಪಗಳನ್ನೂ ಚಿಂತಿಸಬೇಕು. ತೀರ್ಥದಲ್ಲಿರುವ ಭಗವಂತನ ರೂಪವನ್ನೂ ಸ್ಮರಿಸಬೇಕು. ಆ ನಂತರ ಕೆಳಗಿನ ಶ್ಲೋಕವನ್ನು ಹೇಳಬೇಕು.

**ಕಾರ್ತಿಕೇಽಹಂ ಕರಿಷ್ಯಾಮಿ**
**ಪ್ರಾತಃಸ್ನಾನಂ ಜನಾರ್ದನ ।**
**ಪ್ರೀತ್ಯರ್ಥಂ ತವ ದೇವೇಶ**
**ದಾಮೋದರ ಮಯಾ ಸಹ ।।**

**ಧ್ಯಾತ್ವಾಹಂ ತ್ವಾಂ ಚ ದೇವೇಶ**
**ಜಲೇಸ್ಮಿನ್ ಸ್ನಾತುಮುದ್ಯತಃ ।**
**ತವ ಪ್ರಸಾದಾತ್ ಪಾಪಂ ಮೇ**
**ದಾಮೋದರ ವಿನಶ್ಯತು ।।**

ಸ್ವಯಂ  ಹುಟ್ಟು ಸಾವಿಲ್ಲದ, ಭಕ್ತರ ಹುಟ್ಟು ಸಾವುಗಳನ್ನು ವಿನಾಶ ಮಾಡುವ ಓ ಜನಾರ್ದನ, ನಿನ್ನ ಪ್ರೇಮವನ್ನು ಪಡೆಯಲು ಕಾರ್ತಿಕದ ಈ ಪ್ರಾತಃಕಾಲದಲ್ಲಿ ಸ್ನಾನ ಮಾಡುತ್ತಿದ್ದೇನೆ. ನನ್ನ ಪಾಪಗಳನ್ನೂ, ನನ್ನ ದೇಹದ ನಶ್ವರತೆಯನ್ನೂ ಚಿಂತಿಸಿ, ನಿನ್ನ ರಾಧಾ ದಾಮೋದರರೂಪವನ್ನೂ ಧೇನಿಸಿ, ಈ ನೀರಿನಲ್ಲಿ ಕಾರ್ತಿಕಸ್ನಾನವನ್ನು ಮಾಡಲು ಉದ್ಯುಕ್ತನಾಗಿದ್ದೇನೆ. ಓ ದಾಮೋದರ, ನಿನ್ನ ಅನುಗ್ರಹದಿಂದ ನನ್ನ ಪಾಪವೆಲ್ಲವೂ ವಿನಾಶವಾಗಲಿ.  ಹೀಗೆ ಹೇಳಿ **ಭಾರತೀರಮಣ ಮುಖ್ಯಪ್ರಾಣಾಂತರ್ಗತ ರಾಧಾದಾಮೋದರಾಯ ನಮಃ** ಎಂದು ಹೇಳುತ್ತ ನದಿಯಲ್ಲಿ ಮುಳುಗಬೇಕು, ಸ್ನಾನ ಮಾಡಬೇಕು.

ಮೂರು ಬಾರಿ, ಐದು ಬಾರಿ, ಏಳುಬಾರಿ ಸ್ನಾನ ಮಾಡಿ ಸಕಲ ದೇವತೆಗಳನ್ನೂ ಪ್ರಾರ್ಥಿಸಬೇಕು

**ಗಂಗಾದ್ಯಾಃ  ಸರಿತಃ ಸರ್ವಾಃ**
**ತೀರ್ಥಾನಿ ಜಲದಾ ನದಾಃ।**
**ಸಸಪ್ತಸಾಗರಾಃ ಸರ್ವೇ**
**ಮಾಂ ಪುನಂತು ಜಲಾಶಯಾಃ।।**

**ಪತಿವ್ರತಾಸ್ತ್ವದಿತ್ಯಾದ್ಯಾಃ**
**ಯಕ್ಷಾಃ ಸಿದ್ಧಾಃ ಸಪನ್ನಗಾಃ ।**
**ಓಷಧ್ಯಃ ಪರ್ವತಾಶ್ಚಾಪಿ**
**ಮಾಂ ಪುನಂತು ತ್ರಿಲೋಕಜಾಃ ।।**

ಗಂಗಾದಿ ಎಲ್ಲ ನದಿಗಳು, ಸರೋವರಗಲು, ಮೇಘಗಳು, ನದಗಳು, ಸಪ್ತಸಾಗರಗಳು ಮುಂತಾದ ಎಲ್ಲ ಜಲಾಶಯಗಳೂ ನನ್ನನ್ನು ಪವಿತ್ರಗೊಳಿಸಲಿ.

ಮೂರು ಲೋಕಗಳಲ್ಲಿರುವ  ಅದಿತಿ ಮುಂತಾದ ಪತಿವ್ರತೆಯರು, ಯಕ್ಷರು, ಸಿದ್ಧರು, ನಾಗರು, ಓಷಧಿಗಳು, ಪರ್ವತಗಳು ನನ್ನನ್ನು ಪವಿತ್ರಗೊಳಿಸಲಿ.

## ಸ್ನಾನಾಂಗ ಅರ್ಘ್ಯ

ಆ ನಂತರ ಮತ್ತೊಮ್ಮೆ ನೀರಲ್ಲಿ ಮುಳುಗೆದ್ದು ಜಲಶಾಯಿಯಾದ ಶ್ರೀಹರಿಗೆ ಅರ್ಘ್ಯವನ್ನು ನೀಡಬೇಕು.

**ನಮಃ ಕಮಲನಾಭಾಯ**
**ನಮಸ್ತೇ ಜಲಶಾಯಿನೇ**
**ನಮಸ್ತೇಸ್ತು ಹೃಷೀಕೇಶ**
**ಗೃಹಾಣಾರ್ಘ್ಯಂ ನಮೋಸ್ತುತೇ**

ಘನೋದಕದಲ್ಲಿ ಪವಡಿಸಿ, ಪದ್ಮವನ್ನು ನಾಭಿಯಲ್ಲಿ ಪಡೆದ ಓ ಹೃಷೀಕೇಶನೇ, ಇಂದ್ರಿಯಗಳ ಸ್ವಾಮಿಯೇ ನಿನಗೆ ಅರ್ಘ್ಯವನ್ನು ನೀಡುತ್ತಿದ್ದೇನೆ, ಸ್ವೀಕರಿಸು. ನಿನಗೆ ನನ್ನ ನಮಸ್ಕಾರಗಳು.

ಆ ನಂತರ ಗಂಗಾ-ಗೋದಾವರೀ-ಕೃಷ್ಣಾ-ಮಾನಸ,ಸ್ವಾಮಿ,ಚಂದ್ರಾಪುಷ್ಕರಿಣಿಗಳೂ, ಕಾವೇರಿ ಸರಸ್ವತಿ, ಸರಯೂ ತುಂಗಭದ್ರೆಯರು, ಯಮುನಾ, ನರ್ಮದಾ, ಸಿಂಧು ಭವನಾಶಿನೀ, ಕುಮುದ್ವತೀ, ಮಲಾಪಹಾ, ತಾಮ್ರಪರ್ಣೀ, ಚಂದ್ರಭಾಗಾ ಮುಂತಾದ ಸಕಲ ತೀರ್ಥಗಳಿಗೆ ಅರ್ಘ್ಯವನ್ನು ನೀಡಬೇಕು[8].

[8] ಉತ್ತಮತೀರ್ಥದಲ್ಲಿ ಅಧಮತೀರ್ಥಗಳಿಗೆ ಅರ್ಘ್ಯ ನೀಡಬಾರದು. ಉದಾಹರಣೆಗೆ ಕಾವೇರಿಯಲ್ಲಿ ತುಂಗಭದ್ರೆಗೆ ನೀಡಬಾರದು.

## ದಾಮೋದರನಿಗೆ ಶಂಖದಿಂದ ಅರ್ಘ್ಯ

ಆ ನಂತರ ನೀರಿನಿಂದ ಮೇಲೆ ಬಂದು ಮೈ ವರೆಸಿಕೊಂಡು, ನೀರಿನಿಂದಲೇ ಊರ್ಧ್ವಪುಂಡ್ರಗಳನ್ನು ಧರಿಸಿ, ಹೆಣ್ಣುಮಕ್ಕಳು ಕುಂಕುಮವನ್ನು ಧರಿಸಿ, ನೀರನ್ನು ತಂಬಿಗೆಯಲ್ಲಿ ತೆಗೆದುಕೊಂಡು ಬರಬೇಕು. ಒಣಗಿದ ಶುದ್ಧವಸ್ತ್ರವನ್ನುಟ್ಟು ದೇವರ ಮನೆಯ ಮುಂದೆ ದೇವರಿಗೆ ನಮಸ್ಕಾರವನ್ನು ಮಾಡಿ, ಗೋಪೀಚಂದನ ಮುದ್ರೆಗಳನ್ನು ಧರಿಸಿ ಶಂಖದಿಂದ ರಾಧಾದಾಮೋದರರಿಗೆ ಅರ್ಘ್ಯವನ್ನು ನೀಡಬೇಕು.

ನದೀ, ಸರೋವರಗಳಲ್ಲಿ ಸ್ನಾನ ಮಾಡುವಾಗ ನೀರಿನಿಂದ ಹೊರಬಂದು ದಡದಲ್ಲಿ ಕುಳಿತು ಅರ್ಘ್ಯಪ್ರದಾನ ಮಾಡಬೇಕು.

ಇವತ್ತಿನ ಬಹುತೇಕ ಜನರು ತೀರ್ಥದಲ್ಲಿಯೇ ದಾಮೋದರನಿಗೆ ಅರ್ಘ್ಯವನ್ನು ನೀಡುತ್ತಾರೆ. ತಪ್ಪು. ಸ್ನಾನ ಮುಗಿದ ನಂತರ ದೇವರ ಮನೆಯ ಮುಂದೆ ಬಂದು ಪೂರ್ವ ಅಥವಾ ಉತ್ತರಾಭಿಮುಖನಾಗಿ

ಕುಳಿತು ಶಂಖದಲ್ಲಿ ಬಂಗಾರ, ರತ್ನ, ಹೂಗಳು ಮತ್ತು ನೀರನ್ನು ತುಂಬಿಸಿ ಅರ್ಘ್ಯವನ್ನು ನೀಡಬೇಕು. ಈ ರೀತಿಯಾಗಿ ಅರ್ಘ್ಯವನ್ನು ನೀಡುವದರಿಂದ ಸಮಗ್ರ ಭೂಮಿಯಲ್ಲಿ ಸುವರ್ಣವನ್ನು ತುಂಬಿಸಿ ಜ್ಞಾನಿಗಳಿಗೆ ದಾನ ನೀಡಿದಷ್ಟು ಪುಣ್ಯವನ್ನು ಶ್ರೀಹರಿ ಕರುಣಿಸಿತ್ತಾನೆ, ಎಂದು ಪದ್ಮಪುರಾಣದಲ್ಲಿ ಸಾಕ್ಷಾದ್ ಭಗವಂತನ ವಚನವಿದೆ —

**ಇಮೌ ಮಂತ್ರೌ ಸಮುಚ್ಚಾರ್ಯ**
**ಯೋಽರ್ಘ್ಯಂ ಮಹ್ಯಂ ಪ್ರಯಚ್ಛತಿ**
**ಸುವರ್ಣರತ್ನಪುಷ್ಪಾಂಬು-**
**ಪೂರ್ಣಶಂಖೇನ ಪುಣ್ಯವಾನ್**
**ಸುವರ್ಣಪೂರ್ಣಾ ಪೃಥಿವೀ**
**ತೇನ ದತ್ತಾ ನ ಸಂಶಯಃ**

ಪುಣ್ಯವಂತರು ರತ್ನ,ಬಂಗಾರ,ಹೂ, ನೀರಿನಿಂದ ತುಂಬಿದ ಶಂಖದಲ್ಲಿ ನನಗೆ ಅರ್ಘ್ಯವನ್ನು ನೀಡಿ ಸುವರ್ಣಪೂರ್ಣ ಭೂಮಿಯನ್ನು ದಾನ ಮಾಡಿದ ಪುಣ್ಯವನ್ನು ಗಳಿಸುತ್ತಾರೆ, ಸಂಶಯವಿಲ್ಲ. ಆದ್ದರಿಂದ ಸ್ನಾನ ಮಾಡಿದ ನಂತರ ಶುದ್ಧ ವಸ್ತ್ರವನ್ನುಟ್ಟು, ಗೋಪೀಚಂದನ ಮುದ್ರೆಗಳನ್ನು

ಧರಿಸಿ ರಾಧಾದಾಮೋದರನಿಗೆ ಅರ್ಘ್ಯವನ್ನು ಪ್ರದಾನ ಮಾಡಬೇಕು.

ದೇವರಿಗೆ ಸಮರ್ಪಿಸುವ ಒಂದು ಬಂಗಾರದ ನಾಣ್ಯ ಅಥವಾ ಯಾವುದೇ ಬಂಗಾರದ ವಸ್ತು, ಹವಳ, ಮುತ್ತು, ವಜ್ರ ಮುಂತಾದ ಯಾವುದೇ ರತ್ನಗಳು, ಆ ರತ್ನಗಳಿರುವ ಉಂಗುರವನ್ನು ಶಂಖದಲ್ಲಿ ಹಾಕಿ ಅರ್ಘ್ಯವನ್ನು ನೀಡಿ.

ಹೆಣ್ಣುಮಕ್ಕಳಿಗೆ ಗಂಡಸರು ಅರ್ಘ್ಯವನ್ನು ನೀಡಿಸಬೇಕು. ಗಂಡಸರು ಇಲ್ಲದೇ ಇದ್ದ ಪಕ್ಷದಲ್ಲಿ ಹೆಣ್ಣುಮಕ್ಕಳೇ ಶಂಖದಿಂದ ಅರ್ಘ್ಯವನ್ನು ನೀಡಬೇಕು.

## ಅರ್ಘ್ಯಮಂತ್ರ

ಅರ್ಘ್ಯಪ್ರದಾನಮಾಡುವ ಸಂದರ್ಭದಲ್ಲಿ ಕೆಳಗಿನ ಮಂತ್ರವನ್ನು ಪಠಿಸಬೇಕು

**ವ್ರತಿನಃ ಕಾರ್ತಿಕೇ ಮಾಸಿ**
**ಸ್ನಾತಸ್ಯ ವಿಧಿವನ್ಮಮ ।**
**ಗೃಹಾಣಾರ್ಘ್ಯಂ ಮಯಾ ದತ್ತಂ**
**ರಾಧಯಾ ಸಹಿತೋ ಹರೇ ।।**

ಕಾರ್ತಿಕದಲ್ಲಿ ಪ್ರಾತಃಸ್ನಾನದ ವ್ರತವನ್ನು ಸ್ವೀಕರಿಸಿ, ಶಾಸ್ತ್ರ ತಿಳಿಸಿದಂತೆ ಸ್ನಾನ ಮಾಡಿ ಬಂದಿರುವ ನಾನು ನೀಡುತ್ತಿರುವ ಅರ್ಘ್ಯವನ್ನು, ಓ ರಾಧಾಸಮೇತನಾದ ದಾಮೋದರನೇ ಸ್ವೀಕರಿಸು.

ರಾಧಾ ಎಂದರೆ ನಿರಂತರವಾಗಿ ಹರಿಯನ್ನು ಅರಾಧಿಸುವವಳು ಎಂದರ್ಥ. ಮಹಾಲಕ್ಷ್ಮೀದೇವಿ ರಾಧಾ ಎಂಬ ಹೆಸರಿನಿಂದ ಗೋಲೋಕದಲ್ಲಿದ್ದಾಳೆ ಎಂದು ಬೃಹನ್ನಾರದೀಯ ಪುರಾಣ ತಿಳಿಸುತ್ತದೆ. ದಾಮೋದರರದ ಮಡದಿಯಾದ ಲಕ್ಷ್ಮೀದೇವಿಯ ರೂಪದ ಹೆಸರು ರಾಧಾ. ತಾಯಿಯ ಭಕ್ತಿಗೆ ಮೆಚ್ಚಿ

ಅವಳಿಂದ ಹೊಟ್ಟೆಗೆ ದಾರ ಕಟ್ಟಿಸಿಕೊಂಡ ನಮ್ಮ ಸ್ವಾಮಿಗೆ ದಾಮೋದರ ಎಂದು ಹೆಸರು. ಭಾರತೀಪತೀಶರಾದ ಆ ರಾಧಾದಾಮೋದರರರನ್ನು ನೆನೆದು ಅರ್ಘ್ಯವನ್ನು ಸಮರ್ಪಿಸಬೇಕು.

ಅರ್ಘ್ಯವನ್ನು ನೆಲದ ಮೇಲೆ ಬಿಡಬಾರದು. ಒಂದು ಪಾತ್ರೆಯಲ್ಲಿ ಬಿಡಬೇಕು ಎನ್ನುವದನ್ನು ಮರೆಯಬಾರದು.

## ಕರ್ಮಸಮರ್ಪಣೆ

ಆ ನಂತರ ದೇವರಿಗೆ ನಮಸ್ಕಾರ ಮಾಡಿ

**ಅದ್ಯ ಮಯಾ ಕೃತೇನ ಕಾರ್ತಿಕಸ್ನಾನೇನ ಮಮ ಗುರ್ವಂತರ್ಗತ (ಪತ್ಯಂತರ್ಗತ) ಪರಮಗುರ್ವಂತರ್ಗತ ಶ್ರೀರಾಘವೇಂದ್ರ-ವ್ಯಾಸರಾಜ-ಜಯತೀರ್ಥಾದಿಸಮಸ್ತಗುರ್ವಂತರ್ಗತ ಸಮಸ್ತತೀರ್ಥಾಭಿಮಾನಿ ತತ್ವಾಭಿಮಾನಿದೇವತಾಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಕಾರ್ತಿಕರಾಧಾದಾಮೋದರಾಭಿನ್ನ**

## ಮಮ ಬಿಂಬಮೂರ್ತಿ ಶ್ರೀವಿಷ್ಣುಃ ಪ್ರೀಯತಾಮ್.

ಎಂದು ಸಮರ್ಪಿಸಿ, ಈ ಕರ್ಮವನ್ನು ನಾನು ಮಾಡಿಲ್ಲ, ನನ್ನ ಅಂತರ್ಯಾಮಿ ನನ್ನಿಂದ ಮಾಡಿಸಿ-ದ್ದಾನೆ, ಈ ಸ್ನಾನವೂ ಅವನ ಪೂಜಾರೂಪ-ವಾದದ್ದು, ಈ ಕರ್ಮದಿಂದ ಪ್ರೀತನಾದ ಶ್ರೀಹರಿ ಭಕ್ತಿ ಜ್ಞಾನ ವೈರಾಗ್ಯಗಳನ್ನು ಕರುಣಿಸಲಿ ಎಂದು ಚಿಂತಿಸಿ ವಿರಾಡ್ರೂಪವನ್ನು ಸ್ಮರಿಸಬೇಕು.

ಅತ್ಯಂತ ಸುಲಭವಾದ ಈ ಕಾರ್ತಿಕಸ್ನಾನವನ್ನು ಶ್ರೀ ವಿಷ್ಣುಪ್ರೀತಿಕರವಾಗಿ ಮಾಡುವ ಸೌಭಾಗ್ಯ ನಿಮ್ಮದಾಗಲಿ ಎಂಬ ಮನಃಪೂರ್ವಕ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

**ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.**

**ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.**

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491